

بِسۡمِ اللّٰہِ الرَّحۡمٰنِ الرَّحِیۡمِ

# ರಮಝಾನ್ ಮತ್ತು ತಖ್ವ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **18–05–2018** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

يَا أَيُّهَا الَّذِينَ آمَنُوا كُتِبَ عَلَيْكُمُ الصِّيَامُ كَمَا كُتِبَ عَلَى الَّذِينَ مِن قَبْلِكُمْ لَعَلَّكُمْ تَتَّقُونَ

**ಯಾ ಅಯ್ಯುಹಲ್ಲಧೀನ ಆಮನೂ ಕುತಿಬ ಅಲೈಕುಮುಸ್ಸಿಯಾಮು ಕಮಾ ಕುತಿಬ ಅಲಲ್ಲಧೀನ ಮಿನ್ ಕಬ್‌ಲಿಕುಮ್ ಲಅಲ್ಲಕುಮ್ ತತ್ತಖೂನ್**.

ಓ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ. (2:184).

ಅಲ್ಲಾಹನ ಅನುಗ್ರಹದಿಂದ ಇನ್ನೊಂದು ರಮಝಾನ್ ತಿಂಗಳನ್ನು ದಾಟಿ ಹೋಗುವ ಭಾಗ್ಯ ನಮಗೆ ಲಭಿಸುತ್ತಿದೆ. ಈ ತಿಂಗಳಲ್ಲಿ ಮುಸ್ಲಿಮರಲ್ಲಿ ಬಹುಸಂಖ್ಯೆಯ ಜನರು ಉಪವಾಸ ವ್ರತ ಅನುಷ್ಠಿಸುವರಲ್ಲದೆ ನಮಾಝ್‌ಗೋಸ್ಕರ ಮತ್ತು ತರಾವೀಹ್‌ಗೋಸ್ಕರ ಮಸ್‌ಜಿದ್‌ಗೆ ಹೋಗುತ್ತಾರೆ. ಅವುಗಳ ಬಗ್ಗೆ ಲಕ್ಷ್ಯ ನೀಡುತ್ತಾರೆ. ನಮ್ಮ ಮಸ್‌ಜಿದ್‌ಗಳಲ್ಲಿಯೂ ಈ ದಿನಗಳಲ್ಲಿ ಸಾಮಾನ್ಯ ದಿನಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಮಾಯಿಸುತ್ತಾರೆ. ಕಡ್ಡಾಯವಾಗಿ ಅನುಷ್ಠಿಸಬೇಕಾದ ಉಪವಾಸ ವ್ರತಾಚರಣೆಯ ಉದ್ದೇಶಲಕ್ಷ್ಯ ತಖ್ವ ಆಗಿದೆ. ಇಸ್ಲಾಮ್ ಶಾಶ್ವತ ಧರ್ಮವಾಗಿದೆ. ಅದು ಖಿಯಾಮತ್ ತನಕ ಜಾರಿಯಲ್ಲಿರುವ ಧರ್ಮವಾಗಿದೆ. ಅದರ ಉಪದೇಶಗಳು ಶಾಶ್ವತವಾಗಿವೆ. ಪವಿತ್ರ ಖುರ್‌ಆನ್ ಲೋಕದ ಪ್ರತಿಯೊಂದು ಮೂಲೆಯಲ್ಲಿಯೂ ತನ್ನ ಮೂಲ ರೂಪದಲ್ಲಿ ಸುರಕ್ಷಿತವಾಗಿದೆ. ಅದು ತಖ್ವದ ಪ್ರಕಾರ ನಡೆಯುವವರಿಗೆ ಮಾರ್ಗದರ್ಶನ ನೀಡುತ್ತದೆ. ಆಖಿರ್ ಝಮಾನದಲ್ಲಿ ನಮ್ಮ ಸುಧಾರಣೆಗೆ, ಪವಿತ್ರ ಖುರ್‌ಆನಿನ ಪ್ರಚಾರಕ್ಕೆ ಮತ್ತು ಅದರ ಉಪದೇಶಗಳನ್ನು ಅನುಷ್ಠಾನಕ್ಕೆ ತರಲು ಗಮನ ಹರಿಸಲಿಕ್ಕೋಸ್ಕರ ಮತ್ತು ಮಾರ್ಗ ತೋರಿಸಲಿಕ್ಕೋಸ್ಕರ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದನು ಮತ್ತು ಅವರನ್ನು ನಂಬುವ ಭಾಗ್ಯ ನಮಗೆ ದಯಪಾಲಿಸಿದನು. ಆದುದರಿಂದ ಉಪವಾಸ ಅನುಷ್ಠಾನದ ವಾಸ್ತವಿಕತೆಯನ್ನು ಮನವರಿಕೆ ಮಾಡಿಕೊಂಡು ಅದರ ಉದ್ದೇಶಲಕ್ಷ್ಯವನ್ನು ಗಳಿಸಲು ಪ್ರಯತ್ನ ಮಾಡುವುದು ಅಹ್ಮದಿಯರಾದ ನಮಗಿರುವ ಬಹಳ ದೊಡ್ಡ ಹೊಣೆಗಾರಿಕೆಯಾಗಿದೆ. ರಮಝಾನಿನ ಉದ್ದೇಶಲಕ್ಷ್ಯ ನಮ್ಮಲ್ಲಿ ತಖ್ವವನ್ನು ಹುಟ್ಟಿಸುವುದು ಮತ್ತು ತಖ್ವದಲ್ಲಿ ಅಭಿವೃದ್ಧಿ ಗಳಿಸುವುದಾಗಿದೆ. ಆದುದರಿಂದ ನಾವು ರಮಝಾನ್‌ನಲ್ಲಿ ತಖ್ವವನ್ನು ಗಳಿಸಲು ಪ್ರಯತ್ನ ಮಾಡುತ್ತೇವೆ ಅಥವಾ ಪ್ರಯತ್ನ ಮಾಡುವವರಾಗುವಾಗ ನಮ್ಮ ಆರಾಧನೆ ಕರ್ಮಗಳ ಕಡೆಗೆ ನಾವು ಲಕ್ಷ್ಯ ನೀಡುವೆವು. ನಾವು ತಖ್ವದಲ್ಲಿ ಚಲಿಸಲು ಪ್ರಯತ್ನಿಸುತ್ತಾ ಉಪವಾಸ ಅನುಷ್ಠಾನ ಮಾಡುವವರಾದರೆ ಕೆಟ್ಟ ಕೆಲಸಗಳಿಂದ ರಕ್ಷಿಸಿಕೊಳ್ಳುವ ಬಗ್ಗೆ ನಮ್ಮ ಶ್ರದ್ಧೆ ಹರಿಯುವುದು. ಅಲ್ಲಾಹನ ಆಜ್ಞೆಗಳು ಯಾವುವು ಎಂದು ಅನ್ವೇಷಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ಬಗ್ಗೆ ನಮ್ಮಲ್ಲಿ ಶ್ರದ್ಧೆ ತಲೆದೋರುವುದು.

ನಾವು ಕೆಡುಕುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುವುದಿಲ್ಲವಾದರೆ ಉಪವಾಸದ ಉದ್ದೇಶಲಕ್ಷ್ಯ ಈಡೇರುವುದಿಲ್ಲ. ನಾವು ಉಪವಾಸ ಅನುಷ್ಠಿಸುವಾಗಲೂ ನಮ್ಮಲ್ಲಿ ಅಹಂಭಾವವಿದ್ದರೆ, ನಮ್ಮ ಕೆಲಸಗಳ ಬಗ್ಗೆ ಮತ್ತು ನಮ್ಮ ಮಾತುಗಳ ಬಗ್ಗೆ ಅನಾವಶ್ಯಕ ಹೆಮ್ಮೆ ಇರುವುದಾದರೆ, ಸ್ವಂತ ಇಷ್ಟಾನುಸಾರ ವರ್ತಿಸುವ ಸ್ವಭಾವವಿದ್ದರೆ, ಜನರಿಂದ ಹೊಗಳಿಕೆ ಗಳಿಸುವ ಅಭಿಲಾಷೆ ಇದ್ದರೆ, ನಮ್ಮ ಅಧೀನದಲ್ಲಿರುವವರು ನಮ್ಮನ್ನು ಮೆಚ್ಚಿಸುವಂತೆ ವರ್ತಿಸಬೇಕೆಂಬುದನ್ನು ಇಷ್ಟಪಡುವುದಾದರೆ, ನಮ್ಮನ್ನು ಹೊಗಳಿದಾಗ ಬಹಳ ಸಂತೋಷಪಡುವುದಾದರೆ ಅಥವಾ ನಾವು ಹೊಗಳಿಕೆ ಬಗ್ಗೆ ಆಶಿಸುವುದಾದರೆ, ಅದು ತಖ್ವಕ್ಕೆ ಅನುಯೋಜ್ಯವಲ್ಲ. ಉಪವಾಸ ಅನುಷ್ಠಿಸುವಾಗ, ಜಗಳ, ಸುಳ್ಳು, ಪಿತೂರಿ ಮೊದಲಾದವುಗಳಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳುವುದಿಲ್ಲವಾದರೆ ಅದು ಸಹ ತಖ್ವಕ್ಕೆ ಅನುಯೋಜ್ಯವಲ್ಲ. ಉಪವಾಸ ಅನುಷ್ಠಿಸುವಾಗ ಆರಾಧನೆಗಳಲ್ಲಿಯೂ ದುಆಗಳಲ್ಲಿಯೂ ಒಳ್ಳೆಯ ಕೆಲಸ ಮಾಡುವುದರಲ್ಲಿಯೂ ನಾವು ನಿರತರಾಗುವುದಿಲ್ಲವಾದರೆ ಅದು ಸಹ ತಖ್ವಕ್ಕೆ ಅನುಯೋಜ್ಯವಾಗಲಾರದು. ಆಗ ನಾವು ತಖ್ವದ ಉದ್ದೇಶಲಕ್ಷ್ಯವನ್ನು ಈಡೇರಿಸಿದವರಾಗುವುದಿಲ್ಲ. ಆದುದರಿಂದ ರಮಝಾನಿನಲ್ಲಿ ಕೆಡುಕುಗಳನ್ನು ತ್ಯಜಿಸುವುದು ಮತ್ತು ಒಳಿತುಗಳನ್ನು ಮಾಡುವುದು ಇವುಗಳೇ ಉಪವಾಸದ ಉದ್ದೇಶ ಲಕ್ಷ್ಯವನ್ನು ಈಡೇರಿಸುತ್ತವೆ. ಮನುಷ್ಯನು ಹೀಗೆ ಮಾಡುವುದರಲ್ಲಿ ಸ್ಥಿರತೆಯಿಂದ ವರ್ತಿಸುವುದಾದರೆ ಅವನು ವಾಸ್ತವಿಕವಾಗಿ ಉಪವಾಸ ಅನುಷ್ಠಾನದ ಉದ್ದೇಶಲಕ್ಷ್ಯವನ್ನು ಗಳಿಸುವವನಾಗುತ್ತಾನೆ. ಹಾಗೆ ಮಾಡುವುದಿಲ್ಲವಾದರೆ ಅವನು ಕೇವಲ ಹಸಿದಿರುವವನಾಗುತ್ತಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವರು: ನೀವು ಉಪವಾಸ ಅನುಷ್ಠಾನದ ಉದ್ದೇಶ ಲಕ್ಷ್ಯವನ್ನು ಗಳಿಸುವುದಿಲ್ಲವಾದರೆ ಅಲ್ಲಾಹನಿಗೆ ನೀವು ಕೇವಲ ಹಸಿದಿರುವುದು ಬೇಕಾಗಿಲ್ಲ.

ಕೆಲವು ಜನರು ಉಪವಾಸದ ಹೆಸರಲ್ಲಿಯೂ ಮೋಸ ಮಾಡುತ್ತಾರೆ. ಅವರು ಹಸಿದಿರುವುದೂ ಇಲ್ಲ. ಅವರು ಉಪವಾಸ ಅನುಷ್ಠಿಸುತ್ತಾ ಇಲ್ಲವಾದರೂ ನಾವು ಉಪವಾಸ ಇದ್ದೇವೆಂದು ಹೇಳುತ್ತಾರೆ. ಇಂತಹ ಜನರು ತಮ್ಮ ಆಹಾರ ಪಾನೀಯಗಳಲ್ಲಿ ಸಹ ನಿಯಂತ್ರಣ ಇಲ್ಲದವರಾಗಿದ್ದಾರೆ. ಅವರು ಅಲ್ಲಾಹನಿಗೋಸ್ಕರ ಕೆಲವು ಗಂಟೆಗಳ ಕಾಲ ತಮ್ಮನ್ನು ತಿನ್ನುವುದರಿಂದಲೂ ಕುಡಿಯುವುದರಿಂದಲೂ ತಡೆದಿರಿಸದವರಾಗಿದ್ದಾರೆ. ಇನ್ನು ಕೆಲವರು ಇಡೀ ದಿನ ಹಸಿವೆಯಿಂದ ಇದ್ದರೂ ನಮಾಝ್ ಮತ್ತು ಇತರ ಆರಾಧನೆಗಳ ಬಗ್ಗೆ ಲಕ್ಷ್ಯ ನೀಡದವರಾಗಿದ್ದಾರೆ. ಅಲ್ಪ ಸ್ವಲ್ಪ ನಮಾಝ್ ಅನುಷ್ಠಿಸಿ ಅಲ್ಲಿಗೆ ಮುಗಿಸುತ್ತಾರೆ. ಅಲ್ಲಾಹನು ಮಾಡಬೇಕೆಂದು

ಹೇಳಿದ ಆಜ್ಞೆಗಳ ಬಗ್ಗೆ ಮತ್ತು ಮಾಡಬಾರದೆಂದು ಹೇಳಿದ ಆಜ್ಞೆಗಳ ಬಗ್ಗೆ ಯಾವ ಶ್ರದ್ಧೆಯೂ ಅವರಿಗಿರುವುದಿಲ್ಲ. ಅಲ್ಲಾಹನು ತಖ್ವವುಳ್ಳವರಾಗಿರಿ ಎಂದು ಹೇಳಿದ ಉದ್ದೇಶವನ್ನು ಅವರು ಈಡೇರಿಸದವರಾಗಿದ್ದಾರೆ. ಆದುದರಿಂದ ಅಹ್ಮದಿಯರಾದ ನಮಗೆ ಬಹಳ ದೊಡ್ಡ ಹೊಣೆಗಾರಿಕೆ ಇದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ, ಅಲ್ಲಾಹನು ಉಪವಾಸದ ಹಕ್ಕುಗಳನ್ನು ಹೇಗೆ ಈಡೇರಿಸಬೇಕೆಂದು ಆಜ್ಞಾಪಿಸಿರುವನೋ ಅದೇ ರೀತಿ ಆ ಹಕ್ಕುಗಳನ್ನು ಈಡೇರಿಸಲು ಪ್ರಯತ್ನಿಸಬೇಕು. ತಖ್ವ ಎಂದರೆ ಏನು? ಅದನ್ನು ನಾವು ಯಾವ ರೀತಿಯಲ್ಲಿ ಮೈಗೂಡಿಸಿದ್ದೇವೆ ಎಂದು ಮನವರಿಕೆ ಮಾಡಲು ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ಸಂದರ್ಭಗಳಲ್ಲಿ ತಖ್ವದ ಬಗ್ಗೆ ನಮಗೆ ತಿಳಿಸಿ ಮುತ್ತಖಿ ಯಾರೆಂದು ವಿವರಿಸಿದ್ದಾರೆ. ವಾಸ್ತವಿಕ ಸುಖ ಮತ್ತು ರಸಾನುಭೂತಿ ತಖ್ವದಿಂದಲೇ ಲಭಿಸುತ್ತದೆ. ಲೋಕದ ರಸಾನುಭೂತಿಗಳಿಂದಲ್ಲ. ಮನುಷ್ಯನು ನೈಜ ಸತ್ಯವಿಶ್ವಾಸಿಯಾಗಲು ತನ್ನ ಪ್ರತಿಯೊಂದು ಕೆಲಸ ಅಲ್ಲಾಹನ ಇಷ್ಟಪ್ರಕಾರ ಮಾಡಿ ಅವನ ಸಂಪ್ರೀತಿ ಗಳಿಸಬೇಕಾಗಿದೆ. ಇದುವೇ ಮೂಮಿನ್ ಮತ್ತು ಕಾಫಿರ್ ಮಧ್ಯೆ ಇರುವ ವ್ಯತ್ಯಾಸವಾಗಿದೆ. ನಾವು ಅಲ್ಲಾಹನ ಬಗ್ಗೆ ಸೂಕ್ಷ್ಮಜ್ಞಾನ ಗಳಿಸುವುದರಲ್ಲಿ ಸಹ ಅಭಿವೃದ್ಧಿ ಗಳಿಸಬೇಕೆಂದು ಸಹ ಅವರು ಹೇಳಿದ್ದಾರೆ. ಪ್ರತಿಯೊಂದು ಬರಲಿರುವ ದಿನ ನಮ್ಮನ್ನು ಅಲ್ಲಾಹನ ಜ್ಞಾನದಲ್ಲಿ ಮುಂದೆ ಸಾಗುವವರನ್ನಾಗಿ ಮಾಡಬೇಕು. ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉದ್ಧರಣೆಗಳನ್ನು ನಿಮ್ಮ ಮುಂದಿರಿಸುವೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅನೇಕ ಸಾರಿ ನನಗೆ ಅಲ್ಲಾಹನಿಂದ ಇಲ್‌ಹಾಮ್ ಅವತೀರ್ಣವಾಗಿದೆ, ನೀವು ಮುತ್ತಖಿಗಳಾಗುವುದಾದರೆ ತಖ್ವದ ಸೂಕ್ಷ್ಮ ಮಾರ್ಗಗಳಲ್ಲಿ ಚಲಿಸುವವರಾದರೆ ಅಲ್ಲಾಹನು ನಿಮ್ಮ ಜೊತೆಗಿರುವನು ಎಂದು. ನನ್ನ ಹೃದಯದಲ್ಲಿ ಬಹಳ ನೋವುಂಟಾಗುತ್ತದೆ– ನಮ್ಮ ಜಮಾಅತ್ ಸತ್ಯವಾದ ತಖ್ವ ಮತ್ತು ಪರಿಶುದ್ಧತೆಯನ್ನು ತಮ್ಮಲ್ಲಿ ಅಳವಡಿಸುವಂತೆ ಮಾಡಲು ನಾನು ಏನು ಮಾಡಬೇಕೆಂದು. ನಾನು ಎಷ್ಟು ದುಆ ಮಾಡುತ್ತೇನೆಂದರೆ ದುಆ ಮಾಡುತ್ತಾ ಮಾಡುತ್ತಾ ನನಗೆ ಬಲಹೀನತೆ ಉಂಟಾಗುತ್ತದೆ. ಕೆಲವು ಸಾರಿ ಪ್ರಜ್ಞಾಶೂನ್ಯತೆ ಮತ್ತು ನಾಶೋನ್ಮುಖತೆ ತನಕ ತಲಪುತ್ತದೆ. ಒಂದು ಜಮಾಅತ್ ಅಲ್ಲಾಹನ ದೃಷ್ಟಿಯಲ್ಲಿ ಮುತ್ತಖಿಯಾಗುವ ತನಕ ಅಲ್ಲಾಹನ ಸಹಾಯ ಅದಕ್ಕೆ ದೊರಕಲಾರದು. ಹಿಂದಿನ ಕಾಲದ ಎಲ್ಲ ಪವಿತ್ರ ಗ್ರಂಥಗಳ, ತೌರಾತ್ ಮತ್ತು ಇಂಜೀಲಿನ ಉಪದೇಶಗಳ ಸಾರಾಂಶ ಇದೇ ಆಗಿದೆ. ಪವಿತ್ರ ಖುರ್‌ಆನ್ ಒಂದೇ ಒಂದು ಶಬ್ದದ ಮೂಲಕ ಅಲ್ಲಾಹನ ಈ ವೈಭವಶಾಲಿ ಇಚ್ಛೆ ಮತ್ತು ಸಂಪೂರ್ಣ ಸಂಪ್ರೀತಿಯನ್ನು ಪ್ರಕಟಿಸಿದೆ. ಎಂದರೆ ತಖ್ವ ಎಂಬ ಶಬ್ದದ ಮೂಲಕ. ನಾನು ಹೀಗೆ ಚಿಂತಿಸುತ್ತಿದ್ದೇನೆ: ನಮ್ಮ ಜಮಾಅತಿನಲ್ಲಿರುವ ನೈಜ ಮುತ್ತಖಿಗಳನ್ನು, ಧರ್ಮ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರನ್ನು ಮತ್ತು ಲೋಕದಿಂದ ಸಂಬಂಧ ವಿಚ್ಛೇದಿಸಿ ಅಲ್ಲಾಹನ ಕಡೆಗೆ ಸಾಗುವವರನ್ನು ಪ್ರತ್ಯೇಕಿಸಿ ಅವರಿಗೆ ಕೆಲವು ಧಾರ್ಮಿಕ ಕೆಲಸಗಳನ್ನು ವಹಿಸಿಕೊಡಬೇಕೆಂದು. ಅನಂತರ ನಾನು ಲೌಕಿಕ ಕಾರ್ಯಗಳಲ್ಲಿ ಮಾತ್ರ ನಿರತರಾಗುವವರನ್ನು, ರಾತ್ರಿ ಹಗಲು ಶವ ಸದೃಶ ಲೋಕವನ್ನು ಆಶಿಸುವುದರಲ್ಲಿ ಜೀವ ನೀಡುವವರನ್ನು ಪರಿಗಣಿಸಲಾರೆನು.

ಒಟ್ಟಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗಿದ್ದ ನೋವು, ಜಮಾಅತಿನ ಪ್ರತಿಯೊಬ್ಬ ವ್ಯಕ್ತಿಯೂ ತಖ್ವದಲ್ಲಿ ಚಲಿಸುವವನಾಗಬೇಕೆಂದು ಆಗಿತ್ತು. ಲೋಕದ ಚಿಂತೆಯೇ ಸದಾಸಮಯ ಅವನನ್ನು ತಿಂದು ಹಾಕಬಾರದೆಂದು ಆಗಿತ್ತು. ತಖ್ವದಲ್ಲಿ ಚಲಿಸುವುದೇ ಶರೀಅತಿನ ಸಾರಾಂಶವೆಂದೂ ದುಆಗಳು ಅಲ್ಲಾಹನಿಂದ ಅಂಗೀಕಾರ ಪಡೆಯಲು ಇಚ್ಛಿಸುವುದಾದರೆ ತಖ್ವದಲ್ಲಿ ಚಲಿಸಬೇಕೆಂದೂ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅವರು ತಖ್ವದ ಮಾರ್ಗವನ್ನು ಅವಲಂಬಿಸಬೇಕು. ಏಕೆಂದರೆ ತಖ್ವವನ್ನು ಶರೀಅತಿನ ಸಾರಾಂಶ ಎಂದು ಹೇಳಬಹುದಾಗಿದೆ. ಶರೀಅತನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಶರೀಅತಿನ ತಿರುಳು ತಖ್ವವೇ ಆಗಿದೆ. ತಖ್ವದ ಅನೇಕ ಅಂತಸ್ತುಗಳಿವೆ. ಆದರೆ ಸತ್ಯಾನ್ವೇಷಿಯಾಗಿ ತಖ್ವದ ಆರಂಭದ ಹಂತವನ್ನು ಸ್ಥಿರತೆಯಿಂದಲೂ ನಿಷ್ಠೆಯಿಂದಲೂ ದಾಟಿಹೋಗುವುದಾದರೆ ಅಂತಹ ವ್ಯಕ್ತಿ ಸತ್ಯ ಮತ್ತು ಸತ್ಯಾನ್ವೇಷಣೆಯ ಕಾರಣದಿಂದ ಉನ್ನತ ಪದವಿ ಪಡೆಯುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ: **ಇನ್ನಮಾ ಯತಖಬ್ಬಲುಲ್ಲಾಹು ಮಿನಲ್ ಮುತ್ತಖೀನ್–** ಅಲ್ಲಾಹನು ಮುತ್ತಖಿಗಳ ದುಆಗಳನ್ನು ಸ್ವೀಕರಿಸುತ್ತಾನೆ. ಇದು ಅಲ್ಲಾಹನ ವಾಗ್ದಾನವಾಗಿದೆ. ಅವನ ವಾಗ್ದಾನ ವ್ಯತ್ಯಾಸವಾಗಲಾರದು. **ಇನ್ನಲ್ಲಾಹ ಲಾ ಯುಖ್‌ಲಿಫುಲ್ ಮೀಆದ್–** ಅಲ್ಲಾಹನು ಖಂಡಿತವಾಗಿಯೂ ವಾಗ್ದಾನವನ್ನು ಉಲ್ಲಂಘಿಸುವುದಿಲ್ಲ. ತಖ್ವ ಎಂಬುದು ದುಆಗಳ ಅಂಗೀಕಾರ ಪಡೆಯಲು ಅನಿವಾರ್ಯ ಶರತ್ತಾಗಿದೆ. ಅದು ಮೂಲಭೂತ ಶರತ್ತಾಗಿದೆ. ಒಬ್ಬನು ತಖ್ವದ ಬಗ್ಗೆ ನಿರ್ಲಕ್ಷಿಸಿ ದಾರಿತಪ್ಪಿದವನಾಗಿ ದುಆ ಅಂಗೀಕಾರವಾಗಬೇಕೆಂದು ಬಯಸುವುದಾದರೆ ಅವನು ಅವಿವೇಕಿಯೂ ಮೂರ್ಖನೂ ಆಗುವುದಿಲ್ಲವೇ? ಆದುದರಿಂದ ನಮ್ಮ ಜಮಾಅತಿಗೆ ಕಡ್ಡಾಯವಾಗಿದೆ ಪ್ರತಿಯೊಬ್ಬನು ಸಾಧ್ಯವಿರುವಷ್ಟು ಮಟ್ಟಿಗೆ ತಖ್ವದ ಮಾರ್ಗದಲ್ಲಿ ಚಲಿಸಬೇಕು. ಆ ಮೂಲಕ ದುಆಗಳ ಅಂಗೀಕಾರದ ಭಾಗ್ಯ ಗಳಿಸಿ ವಿಶ್ವಾಸದಲ್ಲಿ ವರ್ಧನೆಯನ್ನು ಪಡೆಯಬೇಕು.

ರಮಝಾನ್‌ನಿಂದ ಲಾಭ ಪಡೆಯಲು ಮೂಲಭೂತ ಆವಶ್ಯಕತೆ ಏನೆಂದರೆ ನಮ್ಮ ಉಪವಾಸ ಮತ್ತು ನಮ್ಮ ಪ್ರತಿಯೊಂದು ಕೆಲಸ ತಖ್ವವನ್ನು ಗಳಿಸಲಿಕ್ಕೋಸ್ಕರವಾಗಬೇಕು. ಅನೇಕ ಜನರು ಹೇಳುತ್ತಾರೆ, ನಾವು ಬಹಳ ದುಆಗಳನ್ನು ಮಾಡಿದೆವು ಆದರೆ ನಮ್ಮ ದುಆಗಳು ಅಂಗೀಕಾರವಾಗುವುದಿಲ್ಲ ಎಂದು. ಅಂತಹ ಜನರು ತಮ್ಮೊಳಗೆ ನೋಡಬೇಕು ಅವರೊಳಗೆ ಧರ್ಮ ಜಯಗಳಿಸಿದೆಯೋ ಎಂದು. ಅವರು ತಖ್ವದಲ್ಲಿ ಚಲಿಸುವವರೋ ಎಂದು. ಅಥವಾ ಲೌಕಿಕ ಕಾರ್ಯಗಳಲ್ಲಿ ಮಗ್ನತೆ ಹೆಚ್ಚಾಗಿದೆಯೋ ಎಂದು. ದುಆ ಅಂಗೀಕಾರ ಪಡೆಯಲು ತಖ್ವ ಶರತ್ತಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮುತ್ತಖಿಗಳಿಗೆ ದೊಡ್ಡ ದೊಡ್ಡ ವಾಗ್ದಾನಗಳಿವೆ. ಅಲ್ಲಾಹನು ಮುತ್ತಖಿಗಳ ವಲಿ (ಸ್ನೇಹಿತ) ಆಗಿರುತ್ತಾನೆ ಎಂಬುದಕ್ಕಿಂತ ಹೆಚ್ಚಾಗಿ ಇನ್ನೇನು ಬೇಕಾಗಿದೆ? ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುತ್ತಾನೆ: **ವಮನ್**

**ಯತ್ತಖಿಲ್ಲಾಹ ಯಜ್‌ಅಲ್ಲಹೂ ಮಖ್‌ರಜನ್ ವಯರ್‌ಝುಖುಹೂ ಮಿನ್ ಹೈಸು ಲಾ ಯಹ್‌ತಸಿಬ್–** ಅಲ್ಲಾಹನು ಮುತ್ತಖಿಗೆ ಪ್ರತಿಯೊಂದು ಕಷ್ಟದಲ್ಲಿಯೂ ಅದರಿಂದ ಹೊರಗೆ ಹೋಗುವ ಒಂದು ದಾರಿ ತೆರೆದು ಕೊಡುತ್ತಾನೆ. ಅವನಿಗೆ ಕಷ್ಟದಿಂದ ಮುಕ್ತಿ ದೊರಕಲು ಅದೃಶ್ಯದಿಂದ ಸಹಾಯ ತಲಪಿಸುತ್ತಾನೆ. ಅವನಿಗೆ ಹೇಗೆ ಆಹಾರ ಒದಗಿಸುತ್ತಾನೆಂದರೆ ಅವನಿಗೆ ಅದರ ಬಗ್ಗೆ ತಿಳಿದಿರುವುದೇ ಇಲ್ಲ. ಇದನ್ನು ಯಾವಾಗಲೂ ನೆನಪಿನಲ್ಲಿರಿಸಿದರೆ ತಖ್ವದಲ್ಲಿ ಚಲಿಸುವ ಕಡೆಗೆ ಶ್ರದ್ಧೆ ಸಹ ಹರಿಯುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನ ಅತ್ಯಂತ ದೊಡ್ಡ ಆಶೆ ಲೋಕದಲ್ಲಿ ಅವನಿಗೆ ಸುಖಸೌಖ್ಯ ಸಿಗಬೇಕೆಂಬುದಾಗಿದೆ. ಅದಕ್ಕೋಸ್ಕರ ಅಲ್ಲಾಹನು ಒಂದೇ ಮಾರ್ಗವನ್ನು ನಿಶ್ಚಯಿಸಿದ್ದಾನೆ. ಅದು ತಖ್ವದ ಮಾರ್ಗವಾಗಿದೆ. ಬೇರೆ ಶಬ್ದಗಳಲ್ಲಿ ಅದನ್ನು ಪವಿತ್ರ ಖುರ್‌ಆನಿನ ಮಾರ್ಗ ಎಂದು ಹೇಳಬಹುದು. ಅಥವಾ ಸಿರಾತೆ ಮುಸ್ತಖೀಮ್ ಎಂದು ಹೆಸರಿಸಬಹುದು. ಅವಿಶ್ವಾಸಿಗಳ ಬಳಿ ಸಹ ಸಂಪತ್ತು ಇದೆ ಅವರು ತಮ್ಮ ಭೋಗಲಾಲಸೆಯಲ್ಲಿ ಮಗ್ನರಾಗಿದ್ದಾರೆ ಎಂದು ಯಾರಾದರೂ ಹೇಳಬಹುದು. ನಾನು ಸತ್ಯವಾಗಿ ಹೇಳುತ್ತೇನೆ, ಅವರು ತುಚ್ಛ ಲೌಕಿಕದ ಮತ್ತು ಬಾಹ್ಯ ಪೂಜಕರ ದೃಷ್ಟಿಯಲ್ಲಿ ಸಂತೋಷ ಭರಿತರಾಗಿ ಕಾಣುತ್ತಾರೆ. ಆದರೆ ವಾಸ್ತವಿಕವಾಗಿ ಅವರು ಒಂದು ಉರಿಯಲ್ಲಿಯೂ ದುಃಖದಲ್ಲಿಯೂ ಮುಳುಗಿರುತ್ತಾರೆ. ನೀವು ಅವರ ಬಾಹ್ಯರೂಪ ನೋಡುತ್ತಿರುವಿರಿ. ನಾನು ಅವರ ಹೃದಯದ ಮೇಲೆ ದೃಷ್ಟಿ ಇರಿಸಿದ್ದೇನೆ. ಅವರು ಅಗ್ನಿಯಲ್ಲೂ ಸಂಕೋಲೆಗಳಲ್ಲೂ ಬಂಧಿತರಾಗಿದ್ದಾರೆ. ಅಲ್ಲಾಹನು ಹೇಳಿದ್ದಾನೆ: **ಇನ್ನಾ ಅಲ್‌ತದ್‌ನಾ ಲಿಲ್ ಕಾಫಿರೀನ ಸಲಾಸಿಲ ವ ಅಗ್‌ಲಾಲನ್ ವ ಸಈರ–** ನಾವು ಅವಿಶ್ವಾಸಿಗಳಿಗೆ ಸಂಕೋಲೆಗಳನ್ನೂ ನೊಗಗಳನ್ನೂ ನರಕವನ್ನೂ ಸಿದ್ಧಪಡಿಸಿದ್ದೇವೆ. ಮುತ್ತಖಿಯಾದವನು ಒಂದು ಗುಡಿಸಿಲಿನಲ್ಲಿ ಸಹ ಸುಖದಿಂದಿರುತ್ತಾನೆ. ಲೌಕಿಕವಾದಿಗಳಾದ, ನಿರಾಶೆ ಮತ್ತು ಅಸೂಯೆಭರಿತರಾದವರಿಗೆ ವೈಭವಶಾಲಿ ಮಹಲುಗಳಲ್ಲಿ ಸಹ ಅಂತಹ ಸುಖ ಲಭಿಸಲಾರದು.

ಖನಾಅತ್ (ಇದ್ದುದರಲ್ಲಿ ತೃಪ್ತಿ) ಇರಬೇಕು. ತಖ್ವ ಇರಬೇಕು. ಅಲ್ಲಾಹನ ಸಂಪ್ರೀತಿ ಗಳಿಸುವುದು ಉದ್ದೇಶವಾಗಿರಬೇಕು. ಹಾಗಿದ್ದಲ್ಲಿ ಕಡಿಮೆ ಸ್ಥಿತಿಯಲ್ಲೂ ಮನುಷ್ಯನು ಸುಖವಾಗಿ ಜೀವಿಸಲು ಸಾಧ್ಯವಿದೆ. ದೊಡ್ಡ ದೊಡ್ಡ ಶ್ರೀಮಂತರಿಗೂ ಅಂತಹ ರಸಾನುಭೂತಿ ಲಭಿಸುವುದಿಲ್ಲ. ಎಷ್ಟು ಹೆಚ್ಚು ಲೌಕಿಕ ಲಾಭ ದೊರಕುತ್ತದೆಯೋ ಅಷ್ಟೇ ಹೆಚ್ಚಿನ ಮಟ್ಟದಲ್ಲಿ ವಿಪತ್ತು ಸಹ ಎದುರಿಗೆ ಬರುತ್ತದೆ. ವಾಸ್ತವಿಕ ಸುಖ ಮತ್ತು ರಸಾನುಭೂತಿ ಲೌಕಿಕ ವಾದಿಗಳಿಗೆ ಲಭಿಸುವುದಿಲ್ಲ. ಧಾರಾಳ ಸಂಪತ್ತು, ಉತ್ತಮ ಬಟ್ಟೆ ಬರೆಗಳು ಮತ್ತು ಉತ್ತಮ ಆಹಾರ ಸಂತೋಷದಾಯಕವಾಗಬಹುದು ಎಂದು ಭಾವಿಸಬೇಡಿರಿ. ಖಂಡಿತವಾಗಿ ಹಾಗೆ ಆಗದು. ಸುಖವು ತಖ್ವವನ್ನು ಅವಲಂಬಿಸಿದೆ. ಸತ್ಯವಾದ ತಖ್ವವಿಲ್ಲದೆ ಯಾವುದೇ ಸುಖ ಸಿಗದು ಎಂದು ತಿಳಿದ ನಂತರ ತಖ್ವಕ್ಕೆ ಅನೇಕ ವಿಭಾಗಗಳಿವೆ ಎಂದು ತಿಳಿದುಕೊಳ್ಳಬೇಕು. ಅವು ಜೇಡನ ಬಲೆಯ ಹಾಗೆ ಹರಡಿ ಕೊಂಡಿರುತ್ತವೆ. ಮನುಷ್ಯನ ಎಲ್ಲಾ ಅಂಗಾಂಗಗಳು, ಅವನ ನಂಬಿಕೆಗಳು, ನಾಲಗೆ, ಸ್ವಭಾವ ಗುಣಗಳು ಮೊದಲಾದುವುಗಳೆಲ್ಲಾ ತಖ್ವಕ್ಕೆ ಸಂಬಂಧಿಸಿವೆ. ನಂಬಿಕೆಗಳಿಗೆ ಸಂಬಂಧಿಸಿ ತಖ್ವವಿರಬೇಕು. ನಾಲಗೆಯಲ್ಲೂ ತಖ್ವವಿರಬೇಕು. ಸ್ವಭಾವಗಳಲ್ಲೂ ತಖ್ವವಿರಬೇಕು. ನಾಲಗೆಯನ್ನು ಅನ್ಯರಿಗೆ ಕಷ್ಟ ನೀಡಲು ಬಳಸಬಾರದೆಂದು ಮಾತ್ರವಲ್ಲ ಆಜ್ಞಾಪಿಸಿರುವುದು. ಆತ್ಮಪ್ರಶಂಸೆ, ಬಡಾಯಿ ಕೊಚ್ಚುವುದು, ತೋರಿಕೆ ಮೊದಲಾದುವು ತಖ್ವದಿಂದ ದೂರ ಸರಿಸುವವುಗಳಾಗಿವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೋಡಿರಿ, **ಇಯ್ಯಾಕ ನಅ್‌ಬುದು** – ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಎಂಬ ಉಪದೇಶ ನೀಡಲಾಗಿದೆ. ಆಗ ಮನುಷ್ಯನು ತನ್ನ ಶಕ್ತಿ ಬಗ್ಗೆ ಭರವಸೆ ಇರಿಸಿ ಅಲ್ಲಾಹನಿಂದ ದೂರ ಸರಿಯಲು ಸಾಧ್ಯವಿತ್ತು. ಆದುದರಿಂದ ಅದರ ಜೊತೆಗೆಯೇ **ಇಯ್ಯಾಕ ನಸ್ತಈನ್** – ನಾವು ನಿನ್ನಿಂದ ಮಾತ್ರ ಸಹಾಯ ಯಾಚಿಸುತ್ತೇವೆ ಎಂದು ಬೇಡಿಕೊಳ್ಳಲು ಉಪದೇಶಿಸಲಾಗಿದೆ. ನೀವು ಮಾಡುವ ಆರಾಧನೆ ನಿಮ್ಮ ಶಕ್ತಿ ಸಾಮರ್ಥ್ಯದಿಂದ ಮಾಡುತ್ತಿರುವಿರಿ ಎಂದು ಭಾವಿಸಬೇಡಿರಿ. ಅಲ್ಲಾಹನ ಸಹಾಯ ಎಂದಿನ ತನಕ ಇರುವುದಿಲ್ಲವೋ, ಅವನು ಶಕ್ತಿ ಮತ್ತು ಭಾಗ್ಯ ನೀಡದಿದ್ದರೆ ಏನನ್ನೂ ಮಾಡಲು ಸಾಧ್ಯವಾಗದು. ನಾಲಗೆಯ ಮೂಲಕವೂ ಮನುಷ್ಯನು ತಖ್ವದಿಂದ ದೂರ ಹೋಗುತ್ತಾನೆ. ಹದೀಸಿನಲ್ಲಿ ಹೀಗೆ ವರದಿಯಾಗಿದೆ, ಯಾವ ವ್ಯಕ್ತಿ ತನ್ನ ನಾಭಿಯ ಕೆಳಗಿರುವ ಅಂಗವನ್ನೂ ನಾಲಗೆಯನ್ನೂ ಕೆಡುಕಿನಿಂದ ರಕ್ಷಿಸುತ್ತಾನೋ ಅವನಿಗೆ ಸ್ವರ್ಗ ಲಭಿಸುವುದರ ಹೊಣೆಗಾರಿಕೆ ನನಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನಿಮ್ಮ ನಾಲಗೆಯ ಮೇಲೆ ಅಧಿಕಾರ ಚಲಾಯಿಸಿರಿ. ನಾಲಗೆ ನಿಮ್ಮ ಮೇಲೆ ಅಧಿಕಾರ ಚಲಾಯಿಸದಿರಲಿ. ನೀವು ಅನಾವಶ್ಯಕವಾಗಿ ಮಾತನಾಡಬೇಡಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ತನ್ನ ಸ್ವಂತ ಅಭಿಲಾಷೆಗಳನ್ನು ಬಿಟ್ಟು ಅಲ್ಲಾಹನ ನಿರ್ಧಾರಗಳ ಬಳಿಗೆ ಹೋಗುವವನಾದರೆ ಅವನು ಯಾವುದೇ ನಿಷಿದ್ಧ ಕೆಲಸ ಮಾಡಲಾರ. ಅವನ ಎಲ್ಲಾ ಕೆಲಸ ಅಲ್ಲಾಹನ ಇಚ್ಛೆಗನುಸಾರವಾಗಿರುತ್ತದೆ. ಜನರು ಪರೀಕ್ಷೆಗೆ ಗುರಿಯಾಗುವಾಗ ಅಲ್ಲಿ ಯಾವಾಗಲೂ ಆಗುವುದೇನೆಂದರೆ ಅವರ ಕೆಲಸ ಅಲ್ಲಾಹನ ನಿರ್ಧಾರಕ್ಕೆ ಅನುಸಾರವಾಗಿರುವುದಿಲ್ಲ. ಅವರು ತಮ್ಮ ಭಾವೋದ್ವೇಗಗಳಿಗೆ ಅಧೀನರಾಗಿ ಚಲಿಸುತ್ತಾರೆ. ಉದಾಹರಣೆಗೆ ಸಿಟ್ಟು. ಆಗ ಅವರು ಎಂತಹ ಕೆಲಸ ಮಾಡುತ್ತಾರೆ ಎಂದರೆ ಮೊಕದ್ದಮೆಗಳು ಪ್ರಾರಂಭವಾಗುತ್ತವೆ. ಅಪರಾಧಗಳು ಸಂಭವಿಸುತ್ತವೆ. ಆದರೆ ಯಾರಾದರೂ ಪವಿತ್ರ ಖುರ್‌ಆನಿನ ಸಲಹೆ ಪಡೆಯದೆ ಏನೂ ಮಾಡುವುದಿಲ್ಲ ಎಂದು ನಿರ್ಧರಿಸುವುದಾದರೆ ಪವಿತ್ರ ಖುರ್‌ಆನ್ ಅವನಿಗೆ ಖಂಡಿತವಾಗಿಯೂ ಸಲಹೆ ನೀಡುವುದು.

ನಾವು ನಮ್ಮ ಜೀವಿತವನ್ನು ಬಡತನದಲ್ಲಿ ಕಳೆಯಬೇಕೆಂದು ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತಖ್ವವುಳ್ಳವರು ನಿರಾಡಂಬರ ಹಾಗೂ ಬಡತನದ ಜೀವನ ನಡೆಸಬೇಕು. ಇದು ತಖ್ವದ ಒಂದು ಭಾಗವಾಗಿದೆ. ಅದರಿಂದ ಅನಾವಶ್ಯಕ ಕೋಪವನ್ನು ಎದುರಿಸಬಹುದಾಗಿದೆ. ದೊಡ್ಡ ಜ್ಞಾನಿಗಳಿಗೂ ಸಾಧಿಖ್ (ಸತ್ಯಸಂಧ)ರಿಗೂ ಕೊನೆಯ ಕಷ್ಟದ ಹಂತ ಕೋಪದಿಂದ ರಕ್ಷಿಸಿಕೊಳ್ಳುವುದಾಗಿದೆ. ದುರಹಂಕಾರ ಸಿಟ್ಟಿನಿಂದ ಹುಟ್ಟುತ್ತದೆ. ನನ್ನ ಜಮಾಅತಿನವರು ಪರಸ್ಪರ ದೊಡ್ಡವರು ಚಿಕ್ಕವರು ಎಂದು ಭಾವಿಸಬಾರದು ಎಂದು ನಾನು ಇಚ್ಛಿಸುತ್ತೇನೆ. ಪರಸ್ಪರ

ಗರ್ವದಿಂದಲೂ ಕೀಳು ದೃಷ್ಟಿಯಿಂದಲೂ ನೋಡಬಾರದು. ದೊಡ್ಡವನು ಯಾರು ಚಿಕ್ಕವನು ಯಾರು ಎಂದು ಅಲ್ಲಾಹನಿಗೆ ತಿಳಿದಿದೆ. ಇದು ಒಂದು ರೀತಿಯ ಅಪಮಾನಿಸುವಿಕೆಯಾಗಿದೆ. ನೀವು ಸಿಟ್ಟಿನಿಂದ ಪರಸ್ಪರ ಹೆಸರು ಹೇಳಬೇಡಿರಿ. ಇದು ಧರ್ಮ ಭ್ರಷ್ಟರ ಕೆಲಸವಾಗಿದೆ. ಯಾರಾದರೂ ಒಬ್ಬನನ್ನು ಉದ್ರೇಕಿಸುವುದಾದರೆ ಅವನು ಅದೇ ರೀತಿಯ ಅನುಭವ ಗಳಿಸದೆ ಸಾಯಲಾರನು. ನೀವು ನಿಮ್ಮ ಸಹೋದರರನ್ನು ಕೆಳಮಟ್ಟದವರೆಂದು ಗಣಿಸಬೇಡಿರಿ. ಒಂದೇ ಒರತೆಯಿಂದ ನೀರು ಕುಡಿಯುವಾಗ ಯಾರಿಗೆ ಹೆಚ್ಚು ನೀರು ಲಭಿಸಿದೆ ಎಂದು ತಿಳಿಯಲು ಹೇಗೆ ತಾನೆ ಸಾಧ್ಯ. ಯಾರಾದರೂ ಗೌರವಾರ್ಹನಾಗುವುದು ಲೌಕಿಕ ತತ್ವಗಳಿಂದಲ್ಲ. ಅಲ್ಲಾಹನ ದೃಷ್ಟಿಯಲ್ಲಿ ತಖ್ವವುಳ್ಳವನೇ ದೊಡ್ಡವನು. **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್ ಖಾಕುಮ್** – ಮುತ್ತಖಿಯೇ ಗೌರವಾರ್ಹನಾಗಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸತ್ಯವಿಶ್ವಾಸಿಯಾದವನು ಕಷ್ಟದ ಸ್ಥಿತಿಯಲ್ಲಿಯೂ ಅಲ್ಲಾಹನ ಬಗ್ಗೆ ತಪ್ಪಾಗಿ ಯೋಚಿಸಲಾರ. ಅವನು ಅದನ್ನು ತನ್ನ ತಪ್ಪಿನ ಕಾರಣದಿಂದ ಕಷ್ಟ ಸಂಭವಿಸಿದೆಯೆಂದು ಭಾವಿಸಿ ಅಲ್ಲಾಹನಿಂದ ಕರುಣೆಯನ್ನೂ ಅನುಗ್ರಹವನ್ನೂ ಬೇಡುತ್ತಾನೆ. ಅವನ ಕಷ್ಟಕಾಲ ದಾಟಿ ಹೋಗುತ್ತದೆ. ಅವನ ಪ್ರಾರ್ಥನೆಗಳು ಫಲಕಾರಿಯಾಗುತ್ತವೆ. ಆಗ ಅವನು ತನ್ನ ಬಲಹೀನತೆಯ ಕಾಲವನ್ನು ಮರೆತು ಬಿಡುವುದಿಲ್ಲ. ಅವನು ಅದನ್ನು ನೆನಪಿಡುತ್ತಾನೆ. ತಖ್ವವನ್ನು ಅವಲಂಬಿಸುವವನು ಅಲ್ಲಾಹನ ಸಹಾಯ ಪಡೆಯುವವನಾಗುತ್ತಾನೆ. ನಾವು ಈ ಜಮಾಅತಿನಲ್ಲಿ ಸೇರಿದೆವು ಎಂಬುದರಿಂದ ಮಾತ್ರ ತೃಪ್ತರಾಗಬಾರದು. ಸತ್ಯವಾದ ತಖ್ವ ಇದ್ದರೆ ಮಾತ್ರ ಅಲ್ಲಾಹನ ಸಹಾಯ ದೊರಕುವುದು. ಅದರೊಂದಿಗೆ ಒಳಿತುಗಳು ಇರಬೇಕು. ಅಲ್ಲಾಹನು ಮನುಷ್ಯನ ಕರ್ಮಗಳ ದಾಖಲೆ ಇರಿಸುತ್ತಾನೆ. ಮನುಷ್ಯನು ಸಹ ತನ್ನ ಕೃತ್ಯಗಳ ದಾಖಲೆ ಇರಿಸಬೇಕು. ಆ ಮೇಲೆ ನಾನು ಒಳಿತುಗಳನ್ನು ಮಾಡುವುದರಲ್ಲಿ ಹೆಜ್ಜೆ ಮುಂದೆ ಇರಿಸಿರುವೆನೋ ಎಂದು ನೋಡಬೇಕು.

ಅಲ್ಲಾಹನು ನಮಗೆ ಈ ರಮಝಾನಿನಲ್ಲಿ ತಖ್ವದೊಂದಿಗೆ ಉಪವಾಸ ಅನುಷ್ಠಿಸಲು, ಆರಾಧನೆ ಮಾಡಲು ಮತ್ತು ಉಳಿದ ಕರ್ತವ್ಯಗಳನ್ನು ನಿರ್ವಹಿಸಲು ಭಾಗ್ಯ ನೀಡಲಿ. ಈ ರಮಝಾನ್ ನಮ್ಮ ಜಮಾಅತಿಗೂ ಮುಸ್ಲಿಮರಿಗೂ ಎಲ್ಲ ರೀತಿಯಲ್ಲೂ ಅನುಗ್ರಹದಾಯಕವಾಗಲಿ. ಲೋಕಕ್ಕೋಸ್ಕರ ವಿಶಿಷ್ಟವಾಗಿ ಪ್ರಾರ್ಥಿಸಿರಿ. ಪಾಕಿಸ್ಥಾನದಲ್ಲಿ ಜಮಾಅತಿನ ಮೇಲೆ ದಿನಂಪ್ರತಿ ಕಠಿಣವಾಗಿ ಹಿಂಸೆ ನಡೆಯುತ್ತಿದೆ. ಅಲ್ಲಾಹನು ಕರುಣೆ ತೋರಿಸುವಂತಾಗಲಿ. ನಾವು ಉಪವಾಸ ಅನುಷ್ಠಿಸುವವರೂ ತಖ್ವ ಹೊಂದಿದವರೂ ಹಕ್ಕುಗಳನ್ನು ಈಡೇರಿಸುವವರೂ ಆಗಲಿ. ದುಆಗಳ ಬಗ್ಗೆ ಗಮನಿಸುವವರಾಗಲಿ. ಅಲ್ಲಾಹನು ಮುಸ್ಲಿಮರ ಮೇಲೆ ಕರುಣೆ ದೋರಲಿ. ಅವರ ನಾಯಕರಿಗೆ ಮತ್ತು ಮತಪಂಡಿತರಿಗೆ ಬುದ್ಧಿ ನೀಡಲಿ. ಅವರು ಈ ಕಾಲಘಟ್ಟದ ಇಮಾಮರನ್ನು ನಂಬುವವರಾಗಲಿ. ಲೋಕವು ಯುದ್ಧದ ಕಡೆಗೆ ಎಷ್ಟು ವೇಗವಾಗಿ ಚಲಿಸುತ್ತಿದೆಯೋ ಅದಕ್ಕೆ ಸಂಬಂಧಿಸಿ ಯಾವ ತಡೆಯೂ ಸಂಭವಿಸಿದುದಾಗಿ ಈಗ ಕಾಣುವುದಿಲ್ಲ. ಅಲ್ಲಾಹನು ಮುಸ್ಲಿಮರನ್ನೂ ಅಹ್ಮದಿಯರನ್ನೂ ಈ ಯುದ್ಧಗಳ ಕೆಟ್ಟ ಪರಿಣಾಮಗಳಿಂದ ರಕ್ಷಿಸಲಿ. ಮನುಷ್ಯಕುಲವನ್ನೂ ಅಲ್ಲಾಹನು ರಕ್ಷಿಸುವವನಾಗಲಿ. ಅಲ್ಲಾಹನ ದೃಷ್ಟಿಯಲ್ಲಿ ಅವರ ಸುಧಾರಣೆ ಆಗಬಹುದಾಗಿದ್ದಲ್ಲಿ ಮತ್ತು ಯಾವುದಾದರೂ ಮಾರ್ಗ ತೆರೆಯಬಹುದಾದರೆ ಅವರ ಸುಧಾರಣೆ ಆಗುವಂತಾಗಲಿ. ಅವರು ಅಲ್ಲಾಹನನ್ನು ಗುರುತಿಸುವವರಾಗಲಿ. ಅವರು ಅಲ್ಲಾಹನನ್ನು ಗುರುತಿಸಿ ನಾಶದಿಂದ ರಕ್ಷಿಸಲ್ಪಡುವ ಸ್ಥಿತಿಯನ್ನು ಅಲ್ಲಾಹನು ಉಂಟುಮಾಡಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At Masjid Baithul Futhuh, London. On 18-05-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon